ದಿನಾಂಕಃ 28-11-2022

ಸಾಕ್ಷಿದಾರರಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ ಬಿ.ಎಂ.ಎನ್. ವಕೀಲರಿಂದಃ-**

ನನ್ನ ತಂದೆ-ತಾಯಿಯವರು ಬದುಕಿದ್ದಾಗ ಅವರಿಗೂ ಮತ್ತು ನನಗೂ ಯಾವುದೇ ವೈಮನಸ್ಸು ಇರಲಿಲ್ಲ ಎಂದರೆ ನಿಜ. ಮೃತ 2 ನೇ ಪ್ರತಿವಾದಿ, ಮೃತ ವಿಶಾಲಾಕ್ಷಮ್ಮ ಮತ್ತು 3 ಮತ್ತು 4 ನೇ ಪ್ರತಿವಾದಿಯವರು ಯಾವಾಗ ಲಗ್ನವಾಗಿದ್ದಾರೆ ಎಂದು ಗೊತ್ತಿಲ್ಲ. ಅವರೆಲ್ಲರ ಲಗ್ನಗಳನ್ನು ನಮ್ಮ ತಂದೆಯವರೇ ಮಾಡಿರುತ್ತಾರೆ ಎಂದರೆ ನಿಜ. ಮದುವೆಯಾದ ಲಾಗಾಯ್ತಿನಿಂದ ನನ್ನ ಸಹೋದರಿಯರೆಲ್ಲ ತಮ್ಮ ತಮ್ಮ ಗಂಡನ ಮನೆಗಳಲ್ಲಿಯೇ ವಾಸವಾಗಿದ್ದಾರೆ ಎಂದರೆ ನಿಜ. ಅದೇ ರೀತಿ ನಾನು ಮತ್ತು 1 ನೇ ಪ್ರತಿವಾದಿ ಕೂಡ ಪ್ರತ್ಯೇಕವಾಗಿ ವಾಸವಾಗಿದ್ದೇವೆ ಎಂದರೆ ನಿಜ. ನಾನು ಮತ್ತು 1 ನೇ ಪ್ರತಿವಾದಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದು ಇಲ್ಲಿಗೆ 7-8 ವರ್ಷಗಳು ಆಗಿರುತ್ತವೆ. ನನ್ನ ತಂದೆಯವರು ಬದುಕಿದ್ದಾಗ ದಿನಾಂಕ 08/05/1985 ರಂದು ಒಂದು ಮೃತ್ಯು ಪತ್ರವನ್ನು ಬರೆದಿದ್ದರು ಎಂದರೆ ನಿಜ . ಸದರಿ ವಿಲ್ ಪ್ರಕಾರ ನನ್ನ ಸಹೋದರಿಯರಾದ ನಾಗರತ್ನಮ್ಮ, ಪಾರ್ವತಮ್ಮ ಮತ್ತು ನನ್ನ ತಾಯಿ ಮಹದೇವಮ್ಮ ಇವರುಗಳಿಗೆ ಸ್ವತ್ತುಗಳನ್ನು ಕೊಟ್ಟರು ಎಂದರೆ ನಿಜ. ಆ ರೀತಿಯಾಗಿ ನನ್ನ ತಂದೆಯವರು ವಿಲ್ ಪತ್ರ ಬರೆದ ಸಮಯದಲ್ಲಿ ನಾನು ಮತ್ತು 1 ನೇ ಪ್ರತಿವಾದಿ ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೆವು ಎಂದರೆ ನಿಜ. ಆ ಸಮಯದಲ್ಲಿ ಮೂಗೂರು ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಒಂದು ದೊಡ್ಡ ಮನೆ ಇತ್ತು ಎಂದರೆ ನಿಜ. ಆ ಮನೆಯಲ್ಲಿ ಒಂದು ಭಾಗದಲ್ಲಿ ನಾನು ಮತ್ತು ಇನ್ನೊಂದು ಭಾಗದಲ್ಲಿ ವೀರಪ್ಪ ವಾಸ ಮಾಡುತ್ತಿದ್ದೆವು ಎಂದರೆ ನಿಜ. ಆ ಸಮಯದಲ್ಲಿ ನಮ್ಮ ತಂದೆಯವರು ನಮಗೆ ಕೊಟ್ಟಿದ್ದ ಜಮೀನುಗಳಲ್ಲಿ ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದೆವು ಎಂದರೆ ನಿಜ. ಆ ಸಮಯದಲ್ಲಿ ನನ್ನ ಜೊತೆ ನನ್ನ ಹೆಂಡತಿ, ಮಗ ಮತ್ತು ನನ್ನ ತಾಯಿ ವಾಸ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ನನ್ನ ತಾಯಿಯವರು 1 ನೇ ಪ್ರತಿವಾದಿಯವರ ಜೊತೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ, ಆದರೆ ಕೆಲವು ದಿನಗಳ ಕಾಲ ನನ್ನ ಜೊತೆ, ಇನ್ನೂ ಕೆಲವು ದಿನಗಳ ಕಾಲ 1 ನೇ ಪ್ರತಿವಾದಿಯವರ ಜೊತೆಗೆ ವಾಸ ಮಾಡುತ್ತಿದ್ದರು. ನನ್ನ ತಂದೆಯವರು ದಿನಾಂಕ 08/05/1985 ರಂದು ಬರೆದಿರುವ ವಿಲ್ ಪತ್ರಕ್ಕೆ ನನ್ನದು ಯಾವುದೇ ತಕರಾರು

ಇಲ್ಲ ಎಂದರೆ ನಿಜ. ನಾನು ಸದರಿ ವಿಲ್ ಪತ್ರದ ಒಕ್ಕಣೆಗಳನ್ನು ಓದಿ ತಿಳಿದುಕೊಂಡಿದ್ದೇನೆ. ಸದರಿ ವಿಲ್ ಪತ್ರದಲ್ಲಿ ಸರ್ವೆ ನಂ.1141 ರಲ್ಲಿಯ 10 ಎಕರೆ 9 ಗುಂಟೆ ಪೈಕಿ 5 ಎಕರೆ ಸ್ವತ್ತನ್ನು ನನ್ನ ತಾಯಿಗೆ ಕೊಟ್ಟಿರುತ್ತಾರೆ ಎಂದರೆ ನಿಜ. ಆ ರೀತಿಯಾಗಿ ನೀಡಿರುವ 5 ಎಕರೆ ಸ್ವತ್ತನ್ನು ಈ ಪ್ರಕರಣದಲ್ಲಿ 1 ನೇ ಐಟಂ ಆಗಿ ಸೇರಿಸಿದ್ದೇನೆ ಎಂದರೆ ನಿಜ.

ನನ್ನ ತಂದೆಯವರು ದಿನಾಂಕ 01/05/1988 ರಂದು ಮರಣ ಹೊಂದಿದ ನಂತರ 1 ನೇ ಐಟಂ ಸ್ವತ್ತು ನನ್ನ ತಾಯಿಯ ಸಂಪೂರ್ಣ ಅಧಿಕಾರದ ಸ್ವತ್ತಾಯಿತು ಎಂದರೆ ನಿಜ. ಅದೇ ರೀತಿ ನನ್ನ ತಾಯಿಯವರೇ 1 ನೇ ಐಟಂ ಸ್ವತ್ತನ್ನು ಬೇಸಾಯ ಮಾಡಲು ಪ್ರಾರಂಭಿಸಿದರು ಎಂದರೆ ನಿಜ. ನನ್ನ ತಾಯಿಯವರ ಹೆಸರಿಗೆ ಕಂದಾಯ ಇಲಾಖೆಯಲ್ಲಿ ಖಾತೆಗಳಾದವು ಎಂದರೆ ನಿಜ. ಆ ಜಮೀನಿನಲ್ಲಿ ನನ್ನ ತಾಯಿ ಭತ್ತವನ್ನು ಬೆಳೆಯುತ್ತಿದ್ದರು. ಮೂಗೂರಿನಲ್ಲಿದ್ದ ನಮ್ಮ ಮನೆ ಶಿಥಿಲವಾಗಿ ಬಿದ್ದು ಹೋಗಿದೆ ಎಂದರೆ ನಿಜ. ಈಗ ಮೂಗೂರಿನ ಮನೆಯಲ್ಲಿ ಯಾರೂ ವಾಸವಿಲ್ಲ ಎಂದರೆ ನಿಜ.

ಸಾಯುವ ಸಂದರ್ಭದಲ್ಲಿ ನನ್ನ ತಾಯಿಯವರು 1 ನೇ ಪ್ರತಿವಾದಿ ವೀರಪ್ಪನ ಜೊತೆಗೆ ವಾಸ ಮಾಡುತ್ತಿದ್ದರು ಎಂದರೆ ನಿಜ. ನಮ್ಮ ತಾಯಿ ತೀರಿಹೋದ ನಂತರ ಅವರ ಉತ್ತರಕ್ರಿಯಾದಿ ಕಾರ್ಯಕ್ರಮಗಳನ್ನೆಲ್ಲಾ 1 ನೇ ಪ್ರತಿವಾದಿಯವರೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದರೆ ನನ್ನ ಸಹೋದರಿಯರ ಜೊತೆಗೆ 1 ನೇ ಪ್ರತಿವಾದಿ ಸೇರಿ ಮಾಡಿರುತ್ತಾರೆ ಎಂದು ಹೇಳುತ್ತೇನೆ. ದಾವಾ 1 ನೇ ಐಟಂ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯವರ ಹೆಸರಿಗೆ ಇದೆ ಎಂದರೆ ನಿಜ. ಸಾಕ್ಷಿದಾರರು ಮುಂದುವರಿದು 1 ನೇ ಪ್ರತಿವಾದಿ ವಕೀಲರ ಮೂಲಕ ವಿಲ್ ಪತ್ರ ಮಾಡಿಸಿಕೊಂಡು ತಮ್ಮ ಹೆಸರಿಗೆ ಖಾತೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯವರ ಹೆಸರಿಗೆ ಆಗಿರುವ ಖಾತೆ ಸರಿಯಾಗಿಲ್ಲವೆಂದು ನಾನೇನೂ ಅದನ್ನು ಪ್ರಶ್ನಿಸಿ ಅಪೀಲು ದಾಖಲಿಸಿಲ್ಲ. ನನ್ನ ತಾಯಿಯವರು ಮೃತರಾದ ನಂತರ 1 ನೇ ಪ್ರತಿವಾದಿಯವರೇ ದಾವಾ 1 ನೇ ಐಟಂ ಸ್ವತ್ತನ್ನು ಸ್ವಾಧೀನ ಹೊಂದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನಿಜ.

ನಾನು ಕಳೆದ 7 ವರ್ಷಗಳಿಂದ ಮೈಸೂರಿನಲ್ಲಿ ವಾಸವಿದ್ದೇನೆ. ಮೂಗೂರು ಗ್ರಾಮದ ನನ್ನ ಭಾಗದ ಜಮೀನನ್ನು ನಾನು ಬೇರೊಬ್ಬ ವ್ಯಕ್ತಿಗೆ ವ್ಯವಸಾಯಕ್ಕೆ ಕೊಟ್ಟಿದ್ದೇನೆ. 1 ನೇ ಪ್ರತಿವಾದಿಯವರು ಏನೆಂದು ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ 1 ನೇ ಪ್ರತಿವಾದಿಯವರು ಸ್ವಲ್ಪ ವರ್ಷಗಳ ಕಾಲ ತಮ್ಮ ಮಗಳ ವಿದ್ಯಾಭ್ಯಾಸದ ಕಾರಣ ಕೊಳ್ಳೇಗಾಲದಲ್ಲಿ ವಾಸವಾಗಿದ್ದರು ಎಂದರೆ ನಿಜ. ನಮ್ಮ ಮೂಗೂರಿನ ಮನೆ ಕಳೆದ 7 ವರ್ಷಗಳಿಂದ ವಾಸವಿರಲು ಯೋಗ್ಯವಾಗಿರುವುದಿಲ್ಲ. 1 ನೇ ಪ್ರತಿವಾದಿಯವರು ಹಾಲಿ ಮೈಸೂರಿನ ಗೋಕುಲಂ ಬಡಾವಣೆಯಲ್ಲಿ ವಾಸವಾಗಿದ್ದಾರೆ ಎಂದರೆ ನಿಜ. ನನ್ನ ತಾಯಿಯವರು ಮೈಸೂರಿನ 1 ನೇ ಪ್ರತಿವಾದಿಯವರ ಮನೆಯಲ್ಲಿದ್ದಾಗಲೇ ಮರಣ ಹೊಂದಿರುತ್ತಾರೆ. 1 ನೇ ಪ್ರತಿವಾದಿಯವರ ಜೊತೆಗೆ ನನ್ನ ತಾಯಿ ವಾಸವಿದ್ದಾಗ ನಾನು ಅವರ ಬಳಿ ಹೋಗಿ ಬರುತ್ತಿದ್ದೆನು. ನಮ್ಮ ತಾಯಿಯವರ ಯೋಗಕ್ಷೇಮ, ಆರೋಗ್ಯ ಇತ್ಯಾದಿಗಳನ್ನು 1 ನೇ ಪ್ರತಿವಾದಿಯವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ನಮ್ಮ ತಾಯಿಯವರು ದಿನಾಂಕ 31/07/2008 ರಂದು ತಮ್ಮ ಮುಕ್ತ ಸಮ್ಮತಿಯಿಂದಲೇ 1 ನೇ ಐಟಂ ಸ್ವತ್ತಿನ ವಿಷಯವಾಗಿ 1 ನೇ ಪ್ರತಿವಾದಿಯವರ ಹೆಸರಿಗೆ ಮೃತ್ಯುಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾಯಿಯ ಮರಣಾನಂತರ ಸಂಪೂರ್ಣ ಮಾಲೀಕರಾಗಿ 1 ನೇ ಪ್ರತಿವಾದಿಯವರು ವಿಲ್ ನ ಆಧಾರದ ಮೇಲೆ 1 ನೇ ಐಟಂ ಸ್ವತ್ತಿನ ಖಾತೆಯನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದಾನೆ ಎಂದರೆ ನಿಜ. ಅದೇ ಕಾರಣಕ್ಕೆ 1 ನೇ ಪ್ರತಿವಾದಿಯವರು 1 ನೇ ಐಟಂ ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿರುತ್ತಾರೆ ಎಂದರೆ ನಿಜ.

ಈ ಪ್ರಕರಣ ದಾಖಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ದಾಖಲೆಗಳನ್ನು ಕೂಡ ನಾನೇ ತಂದುಕೊಟ್ಟಿರುತ್ತೇನೆ. ದಾವಾ 2 ನೇ ಶೆಡ್ಯೂಲ್‌ನಲ್ಲಿರುವ ಮನೆ ಪೂ.ಪ.– 45 ಅಡಿ ಮತ್ತು ಉ.ದ.– 61 ಅಡಿ ಇರುತ್ತದೆ. ಸದರಿ ಆಸ್ತಿಯಲ್ಲಿ 3 ತುಂಡು ಖಾಲಿ ಜಾಗ ಇರುತ್ತದೆ. ಸದರಿ ಮೂರೂ ತುಂಡುಗಳ ಅಳತೆಗಳನ್ನು ಹೇಳಬಲ್ಲೆ. ಒಂದು ತುಂಡು ಪೂ.ಪ.– 45 ಅಡಿ ಮತ್ತು ಉ.ದ.–61 ಅಡಿ, ಇನ್ನೊಂದು ತುಂಡು ಪೂ.ಪ.– 35 ಅಡಿ ಮತ್ತು ಉ.ದ.–15 ಅಡಿ, ಮತ್ತೊಂದು ತುಂಡು ಪೂ.ಪ.– 45 ಅಡಿ ಮತ್ತು ಉ.ದ.–

80 ಅಡಿ ವಿಸ್ತೀರ್ಣ ಇರುತ್ತದೆ. ಮೇಲೆ ಹೇಳಿದ 2 ನೇ ಐಟಂ ಸ್ವತ್ತಿನ ವಿಷಯವಾಗಿ ಇಂದಿನವರೆಗೂ ವಿಭಾಗವಾಗಿಲ್ಲ ಎಂದರೆ ನಿಜ. ನಾನು ವಾದಪತ್ರದಲ್ಲಿ ಹೇಳಿರುವಂತೆ 1 ನೇ ಐಟಂನಲ್ಲಿರುವ ಜಮೀನಿನಲ್ಲಿ ನನಗೆ ಯಾವುದೇ ರೀತಿಯ ಭಾಗದ ಹಕ್ಕು ಇಲ್ಲವೆಂದು ಗೊತ್ತಿದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಪ್ರತಿವಾದಿಯವರ ವಾರಸುದಾರರ ಪರ ಶ್ರೀ ಎಸ್.ಎಸ್.ಎಂ. ವಕೀಲರಿಂದಃ**

ತಮ್ಮ ಪಕ್ಷಗಾರರು ಮಾಹಿತಿ ನೀಡಲು ಬಂದಿಲ್ಲವೆಂದು ಮತ್ತು ಅದೇ ಕಾರಣಕ್ಕೆ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿರುತ್ತಾರೆ. ಸೂಕ್ತ ಕಾರಣಗಳಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿಯವರ ಪರ ಶ್ರೀ ಕೆ.ಎಸ್.ಎಸ್. ವಕೀಲರಿಂದಃ**

ದಿನಾಂಕ 08/05/1985 ರಲ್ಲಿ ನನ್ನ ತಂದೆಯವರು ಹೆಂಡತಿ ಮತ್ತು ಹೆಣ್ಣುಮಕ್ಕಳೆಲ್ಲರಿಗೂ ಸೇರಿ ವಿಲ್ ಪತ್ರ ಬರೆದಿದ್ದರು ಎಂದರೆ ನಿಜ. ಸದರಿ ವಿಲ್ ಪತ್ರದ ಪ್ರಕಾರ 3 ನೇ ಪ್ರತಿವಾದಿಯವರಿಗೆ ಸರ್ವೆ ನಂ.1141 ರಲ್ಲಿ 5 ಎಕರೆ 9 ಗುಂಟೆ ಜಮೀನನ್ನು ಕೊಟ್ಟಿದ್ದರು ಎಂದರೆ ನಿಜ. ಸದರಿ ವಿಲ್ ಪತ್ರದ ಪ್ರಕಾರ 3 ನೇ ಪ್ರತಿವಾದಿಯವರು ಮಾಲೀಕರಾಗಿ ಅನುಭವಿಸುತ್ತಾ ಬಂದಿದ್ದಾರೆ ಎಂದರೆ ನಿಜ.

2 ನೇ ಐಟಂನಲ್ಲಿರುವ ಮನೆ ಮತ್ತು ಖಾಲಿ ಜಾಗದಲ್ಲಿ 3 ನೇ ಪ್ರತಿವಾದಿಯವರಿಗೂ ಕೂಡ ಭಾಗದ ಹಕ್ಕು ಇದೆ ಎಂದರೆ ನಿಜ.

**ಮರುವಿಚಾರಣೆಃ ಇರುವುದಿಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.